<u>1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ</u>

<u>S.C.103/2017</u>
<u>S.C.53/2019</u>

ದಿಃ 25.11.2021
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw-2 Pw-8

| | | |
|---|---|---|
| ಹೆಸರು | ಃ | ಅಶೋಕ್ |
| ತಂದೆಯ ಹೆಸರು | ಃ | ಚಂದ್ರಪ್ಪ |
| ವಯಸ್ಸು | ಃ | 29 ವರ್ಷ |
| ಉದ್ಯೋಗ | ಃ | ಚಾಲಕ |
| ವಾಸಸ್ಥಳ | ಃ | ಹೆಗ್ಗನಹಳ್ಳಿ, ಬೆಂಗಳೂರು |

<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>

ನನಗೆ ಮೃತ ನವೀನ್‌ಕುಮಾರ್ ಮತ್ತು ಆತನ ತಮ್ಮ ಚಾಸಾ.6 ಗೊತ್ತಿಲ್ಲ. ಚಾಸಾ.3ರಿಂದ 5 ಮತ್ತು 7 ಹಾಗೂ ಈ ಪ್ರಕರಣದ ಆರೋಪಿಗಳು ನನಗೆ ಗೊತ್ತಿಲ್ಲ. ನನಗೆ ನವೀನ್ ಕುಮಾರ್ ಯಾರು ಎಂದು ಗೊತ್ತಿಲ್ಲ. ಆತ ಜೀವಂತವಿರುವ ಬಗ್ಗೆ ಅಥವಾ ಮೃತನಾಗಿರುವ ಬಗ್ಗೆ ಗೊತ್ತಿಲ್ಲ.

2. ನಾನು ಯಾವುದೇ ದಿನದಯಿ ಮೃತ ನವೀನ್ ಕುಮಾರ್ ಜೊತೆ ಯಾವುದೇ ಆಟವಾಡಲು ಹೋಗಿರಲಿಲ್ಲ. ಆರೋಪಿಗಳು ಆತನ ಮೇಲೆ ಯಾವುದೇ ಕೃತ್ಯ ಎಸಗಿದ ಬಗ್ಗೆ ಗೊತ್ತಿಲ್ಲ. ನಾನು ನವೀನ್

ಕುಮಾರನ ಮೃತದೇಹವನ್ನು ನೋಡಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

3. ಸಾಕ್ಷಿದಾರರು ನಿ.ಪಿ.2 ಮಹಜರ್‌ನಲ್ಲಿರುವ ತಮ್ಮ ಸಹಿಯನ್ನು ಗುರುತಿಸಿದ್ದು, ಅದನ್ನು ನಿ.ಪಿ.2(ಬಿ) ಎಂದು ಗುರುತಿಸಲಾಯಿತು. ಈ ಸಹಿಯನ್ನು ಸುಮಾರು 4 ವರ್ಷಗಳ ಹಿಂದೆ ಮಾಡಿದ್ದೆ. ಯಾವ ಕಾರಣಕ್ಕೆಂದು ಗೊತ್ತಿಲ್ಲ. ಪೊಲೀಸರು ಠಾಣೆಗೆ ಹೋಗಿದ್ದಾಗ ನನ್ನ ಸಹಿ ಪಡೆದಿರುತ್ತಾರೆ. ಯಾವುದೇ ವ್ಯಕ್ತಿ ನನ್ನ ಸಮಕ್ಷಮ ಯಾವುದೇ ಸ್ಥಳ ತೋರಿಸಿ ಯಾವುದೇ ಪಂಚನಾಮೆ ಮಾಡಲಿಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಜಪ್ತಿ ಮಾಡಲಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅಭಿಯೋಜಕರು ಕೋರಿದ್ದಾರೆ. ಅದರಂತೆ ಸಾಕ್ಷಿಯನ್ನು ಪ್ರತಿಕೂಲ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ನೀಡಲಾಗಿದೆ)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ</u>

ನನಗೀಗ ಓದಿ ಹೇಳಿ, ನಿ.ಪಿ.13 ರಿಂದ 15 ಎಂದು ಗುರುತಿಸಲಾದ ದಸ್ತಾವೇಜುಗಳಂತೆ ಪೊಲೀಸರಿಗೆ ಹೇಳಿಕೆಗಳನ್ನು ಮತ್ತು ಮರುಹೇಳಿಕೆಗಳನ್ನು ನೀಡಿದ್ದೇನೆಂದು ಸೂಚಿಸುವುದು ಸರಿಯಲ್ಲ.

2. ದಿಃ12.10.2016 ರಂದು ಬೆಳಿಗ್ಗೆ 8.00 ರಿಂದ 9.00 ಗಂಟೆವರೆಗೆ ದೇವಮಾಚೋಹಳ್ಳಿ ಗ್ರಾಮದ ಚಾಸಾ.1 ರವರ ಮನೆಯ

ಹಿಂಭಾಗ ಡಾ. ಚಿದಾನಂದರವರ ಜಮೀನಿನಲ್ಲಿ ದೂರುದಾರರು ಕೃತ್ಯದ ಸ್ಥಳ ತೋರಿಸಿದ್ದು ಅದನ್ನು ಪರಿಶೀಲಿಸಿ ನಮ್ಮ ಸಮಕ್ಷಮ ವಾಲೀ ಬಾಲ್, ರಕ್ತ ಮಿಶ್ರಿತ ಮಣ್ಣು, ಸಾದಾ ಮಣ್ಣು, ಒಂದು ಬಿಳಿ ಬಣ್ಣದ ಚಪ್ಪಲಿಗಳನ್ನು ಜಪ್ತಿ ಮಾಡಿ, ನಿ.ಪಿ.2ರಂತೆ ಮಹಜರ್ ಕ್ರಮ ಜರುಗಿಸಿ, ಸ್ಥಳದಲ್ಲಿಯೇ ನಮ್ಮ ಸಹಿ ಪಡೆದರು ಎಂದು ಸೂಚಿಸುವುದು ಸರಿಯಲ್ಲ. ಸದರಿ ವಸ್ತುಗಳನ್ನು ಈಗಾಗಲೇ ಮುದ್ದೆ ಮಾಲು 1ರಿಂದ 4 ಎಂದು ಗುರುತಿಸಲಾಗಿದ್ದು, ಸಾಕ್ಷಿಗೆ ತೋರಿಸಿದ್ದು ಅವುಗಳನ್ನು ಈ ಹಿಂದೆ ನೋಡಿಲ್ಲ ಎಂದು ನುಡಿಯುತ್ತಾರೆ. ಸದರಿ ವಸ್ತುಗಳ ಮೇಲಿನ ಚೀಟಿಯಲ್ಲಿನ ಸಹಿಗಳನ್ನು ತೋರಿಸಿದ್ದು, ಸದರಿ ಸಹಿಗಳು ತನ್ನದೇ ಎಂದು ಹೇಳಿದ್ದು, ಸದರಿ ಸಹಿಗಳನ್ನು ಮುದ್ದೆ ಮಾಲು 2(ಬಿ)ಯಿಂದ 4(ಬಿ) ಎಂದು ಗುರುತಿಸಲಾಯಿತು.

3. ನನಗೀಗ ಓದಿ ಹೇಳಿ, ನಿ.ಪಿ.12 ಎಂದು ಈಗಾಗಲೇ ಗುರುತಿಸಲಾಗಿರುವ ಪಂಚನಾಮೆಯಲ್ಲಿ 10ನೇ ಖಂಡಿಕೆಯಂತೆ ಪೊಲೀಸರಿಗೆ ಹೇಳಿಕೆ ನೀಡಿದ್ದೇನೆಂದು ಸೂಚಿಸುವುದು ಸರಿಯಲ್ಲ. ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

<u>ಪಾಟೀ ಸವಾಲುಃ ಶ್ರೀ. ಕೆ.ವಿ.ಕೆ., ಟಿ.ಜಿ., ಮತ್ತು ಎಸ್.ಹೆಚ್.ಎಂ., ವಕೀಲರಿಂದ ಆರೋಪಿಗಳ ಪರವಾಗಿಃ ಇಲ್ಲವೆಂದಿರುತ್ತಾರೆ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಮರುಳಸಿದ್ಧಾರಾಧ್ಯ ಹೆಚ್.ಜೆ)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.